SEVA BHARATHI
सेवा ही परमो धर्मः

ಜನವರಿ - 2026
ಸಂಚಿಕೆ - 01
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ॥
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216




## ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ
## 97 ಯೂನಿಟ್ಸ್ ಸಂಗ್ರಹ

## ಸಂಪನ್ನಗೊಂಡ 35ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ

## ಸಹಾಯ ಹಸ್ತ – ಸೇವಾಧಾಮದಿಂದ ಪುನಶ್ಚೇತನಗೊಂಡ
## ದಿವ್ಯಾಂಗರಿಂದ ಮಾರಾಟ ಮಳಿಗೆ ಯೋಜನೆ

## ಕನ್ಯಾಡಿ ಸೇವಾಭಾರತಿಯಿಂದ ದ.ಕ ಜಿಲ್ಲೆಯ ಜಿಲ್ಲಾಧಿಕಾರಿ ಭೇಟಿ

## ಆಯುಷ್ಮಾನ್ ಸ್ವಾಸ್ಥ್ಯ ಸೇವಾ ಟ್ರಸ್ಟ್ ಉದ್ಘಾಟನೆ – ಸೇವಾಧಾಮದ
## 10 ಮಂದಿ ಫಲಾನುಭವಿಗಳಿಗೆ ಸಾಧನ ಸಲಕರಣೆಗಳಿಗೆ ದೇಣಿಗೆ ಹಸ್ತಾಂತರ

## ಬೆನ್ನುಹುರಿ ಅಪಘಾತಗೊಂಡರೂ
## ಮತ್ತೆ ಕೈ ಹಿಡಿದ ಸರಕಾರಿ ಹುದ್ದೆ - ಕೃಷ್ಣ ಡಿ ಕಡೂರು

ಯಶೋಗಾಥೆ

## ನಮ್ಮೊಂದಿಷ್ಟು

**ನಮಸ್ತೆ ,**

ಇನ್ನೊಂದು ದಾಪುಗಾಲು ಸೇವಾಧಾಮದ ಮುಂದುವರಿದ ಹೆಜ್ಜೆ ಅದು ಬೈಂದೂರಿನಲ್ಲಿ. ಈಗಾಗಲೇ Ajim Premji Foundation ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಮೂರು ವರುಷಗಳಿಗೆ ಖರ್ಚುಗಳು ಆ ಫೌಂಡೇಶನ್ ನಿಂದ ಸಿಗಲಿದೆ. ಆರು ಮಂದಿಗೆ ಉದ್ಯೋಗವು ದೊರೆಯಲಿದೆ. ಈ ಕೇಂದ್ರವು ಮುಖ್ಯವಾಗಿ ಗಾಯನಿರ್ವಹಣೆ ಮತ್ತು ಪುನಶ್ಚೇತನಕ್ಕಾಗಿ ಮೀಸಲಾಗಿದೆ. ಮಾನ್ಯ ಶಾಸಕರಾದ ಶ್ರೀ ಗುರುರಾಜ ಶೆಟ್ಟಿ ಗಂಟಿ ಹೊಳೆಯವರ ದೂರದೃಷ್ಟಿತ್ವವೇ ಈ ಕೇಂದ್ರಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ ಬೆನ್ನುಹುರಿ ಅಪಘಾತಗೊಂಡವರಿಗೆ ಒಂದು ವಿಶ್ವಾಸ ತಾಣವಾಗಿ ಕಾರ್ಯಚರಿಸಲ್ಪಡುತ್ತದೆ.

ಶಿರಸಿಯಲ್ಲಿ ಮೊನ್ನೆ 5 ದಿನಗಳ ಕಾಲ ಶಿರಸಿ ರೋಟರಿ ಕ್ಲಬ್ ಆಯೋಜಿಸಿದ ಆಹಾರ ಮೇಳ ಹಾಗೂ ಆಲೆಮನೆ ಉತ್ಸವ 2026 ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ದಿವ್ಯಾಂಗರ ನೇತೃತ್ವದಲ್ಲಿ ಸೇವಾಧಾಮದಿಂದ ಪುನಶ್ಚೇತನಗೊಂಡ ಬೆನ್ನುಹುರಿ ಅಪಘಾತಕ್ಕೊಳ -ಗಾದ ದಿವ್ಯಾಂಗರು ಮತ್ತು ಅವರ ಕುಟುಂಬ ಒಂದು ಸಂಕಲ್ಪ ತೊಟ್ಟಿತ್ತು. ತಾವೇ ನಿರ್ಮಿಸಿದ ಕರಕುಶಲ ವಸ್ತುಗಳು ಮತ್ತು ತಿಂಡಿಗಳನ್ನು ಮಾರಾಟ ಮಾಡುವುದು ಮತ್ತು ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ಆ ಹಬ್ಬದಲ್ಲಿ ಒಂದು ಸ್ಟಾಲ್ ಅನ್ನು ಮಾಡಿ ಪರಸ್ಪರ ಸಹಕಾರದಿಂದ ಪ್ರಯತ್ನಪಟ್ಟಿತ್ತು.

ಸ್ಥಳೀಯ ರೋ| ಡಾ. ದಿನೇಶ್ ಹೆಗ್ಡೆ, ರೋ| ಡಾ. ಸುಮನ್ ಹೆಡ್ಡೆ ಹಾಗೂ ರೋ| ಮಹೇಶ್ ತೆಲಂಗ ರವರ ಪೂರ್ಣ ಬೆಂಬಲ ದೊರಕಿತ್ತು. ಪರಿಣಾಮವಾಗಿ ವ್ಯಾಪಾರವಾಗಿ ಕಿಂಚಿತ್ ಉಳಿಕೆಯೂ ಆಯಿತು. ಅನೇಕ ಮಂದಿಗೆ ಈ ದಿವ್ಯಾಂಗತೆಯ ಬಗ್ಗೆ ಅರಿವು ದೊರಕಿತು. ಈ ನಿಟ್ಟಿನಲ್ಲಿ ಮಾಡಿದ ಪ್ರಯತ್ನ ಇತರರಿಗೂ ಮಾದರಿಯಾಗುವುದರ ಜೊತೆ ಆಯೋಜಿಸಿದ ನಮ್ಮ ದಿವ್ಯಾಂಗರಿಗೂ ವಿಶ್ವಾಸ ಮೂಡುಬಲ್ಲಿ ಯಶ ಕಂಡಿತು.

ಇನ್ನುಳಿದಂತೆ ಉಜಿರೆಯಲ್ಲಿ ನಡೆದ 103ನೇ ರಕ್ತದಾನ ಶಿಬಿರದಲ್ಲಿ 97 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು. ಹಾಗೇ ಧರ್ಮಸ್ಥಳದಲ್ಲಿ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಇದರಲ್ಲಿ 32 ಮಂದಿ ಮಹಿಳೆಯರು ಟೈಲರಿಂಗ್ ಕಲಿತು ಸ್ವ-ಉದ್ಯೋಗವನ್ನು ನಡೆಸುವಷ್ಟು ಸಬಲೀಕರಣವನ್ನು ಹೊಂದಿದ್ದಾರೆ..

ಮಂಗಳೂರು ಆಯುಷ್ಮಾನ್ ಸ್ವಾಸ್ಥ್ಯ ಸೇವಾ ಟ್ರಸ್ಟ್ (ರಿ.), ಇದರ ಉದ್ಘಾಟನಾ ಸಮಾರಂಭದ ವೇಳೆ ಇದರ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸೇವಾಧಾಮದ 10 ಮಂದಿ ಫಲಾನುಭವಿಗಳಿಗೆ ಮೆಡಿಕಲ್ ಕಿಟ್, ಸೆಲ್ಫ್ ಕೇರ್ ಕಿಟ್, ವಾಕರ್ ಹಾಗೂ ವಾಟರ್ ಬೆಡ್ ಗೆ ರೂ.30,000 ದೇಣಿಗೆಯನ್ನು ನೀಡಿರುವುದು ಸಹ ಶ್ಲಾಘನೀಯವಾಗಿದೆ.

ಒಟ್ಟಿನಲ್ಲಿ ಸೇವಾಕಾರ್ಯಗಳು ನಿರಂತರತೆಯಿಂದ ಕೂಡಿದೆ..



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಡಿಸೆಂಬರ್ ತಿಂಗಳ ಸೇವಾಪಥ ಬಿಡುಗಡೆ




**ಡಿಸೆಂಬರ್ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ ಸೇವಾಪಥವನ್ನು ನಿವೃತ್ತ ಮಹಿಳಾ ಆರೋಗ್ಯ ಸಂದರ್ಶಕರು ಹಾಗೂ ಸೇವಾಭಾರತಿ POSH ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ವಸಂತಿ ಗೌಡರವರು ಬಿಡುಗಡೆಗೊಳಿಸಿರುತ್ತಾರೆ.**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 .: 94482 54888**

### ನಮ್ಮ ತಂಡ :

| | | |
|---|---|---|
| ಶ್ರೀಮತಿ ಸ್ವರ್ಣಗೌರಿ | - | ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | - | ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | - | ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

**ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್**
**ಡಾ. ಎ. ಜಯಕುಮಾರ್ ಶೆಟ್ಟಿ**
**ಶ್ರೀಮತಿ ಮನೋರಮ ಭಟ್**
**ಶ್ರೀ ವಿಜಯ ಕೊಡವೂರು**
**ಶ್ರೀ ಆದಿತ್ಯ ಕಲ್ಲೂರಾಯ**
**ಶ್ರೀ ಕಿರಣ್ ರಾಜ್ ಕೆ.**

### ಸಂಚಾಲಕರು :

**ಶ್ರೀ ಕೆ. ಪುರಂದರ ರಾವ್**
**ಶ್ರೀಮತಿ ಮಮತಾ ಬೊಳ್ಮ**
**ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ**

# ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ : 97 ಯೂನಿಟ್ಸ್ ಸಂಗ್ರಹ










**ಉಜಿರೆ (ಜ.11):** ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ (ರಿ.) ಉಜಿರೆ ಇವರ ನೇತೃತ್ವದಲ್ಲಿ ರೋಟರಿ ಕ್ಲಬ್ ಬೆಳ್ತಂಗಡಿ, ಸೇವಾಭಾರತಿ (ರಿ.), ಕನ್ಯಾಡಿ ॥, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಎಸ್.ಡಿ.ಎಂ ಕಾಲೇಜು( ಸ್ವಾಯತ್ತ), ಉಜಿರೆ, ಕೆ.ಎಂ.ಸಿ. ಬ್ಲಡ್ ಬ್ಯಾಂಕ್, ಮಂಗಳೂರು ಇವರ ಸಹಯೋಗದೊಂದಿಗೆ 10ನೇ ವರ್ಷದ ಬೃಹತ್ ರಕ್ತದಾನ ಶಿಬಿರವು ಜನವರಿ 11 ರಂದು ಉಜಿರೆ ಶಾರದಾ ಮಂಟಪದಲ್ಲಿ ಜರುಗಿತು. .

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರರು ಶ್ರೀ ಶರತ್ ಕೃಷ್ಣ ಪಡುವೆಟ್ನಾಯ ರವರು ಉದ್ಘಾಟಿಸಿ, ರಕ್ತದಾನ ಜೀವನ ಧರ್ಮವಾಗಬೇಕು, ಜೀವನದ ಭಾಗವಾಗವೇಕು. ಆಗ ನಿರಂತರತೆಯೆಡೆಗೆ ಕೊಂಡೊಯ್ಯುತ್ತದೆ ಎಂದು ಶುಭಹಾರೈಸಿದರು.

ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ (ರಿ.), ಅಧ್ಯಕ್ಷರಾದ ಶ್ರೀ ಶೇಖರ ಗೌಡ, ವಿದ್ಯಾನಗರ, ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷರಾದ ರೋ। ಪ್ರೊ। ಪ್ರಕಾಶ್ ಪ್ರಭು, ಬೆಳ್ತಂಗಡಿ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘ (ರಿ) ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಫೆರ್ನಾಂಡಿಸ್, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ (ರಿ.), ಗೌರವಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಜಿ.ಕೆ, ದ.ಕ ವೃತ್ತಿ ನಿರತ ಔಷಧಿ ತಜ್ಞರ ಸಂಘ(ರಿ.), ಕಾರ್ಯದರ್ಶಿಗಳಾದ ಶ್ರೀ ಶ್ರೀಧರ ಕೆ. ವಿ, ಕನ್ಯಾಡಿ ಸೇವಾಭಾರತಿ (ರಿ,), ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ ಮಹಿಳಾ ವೇದಿಕೆಯ ಅಧ್ಯಕ್ಷರು ಶ್ರೀಮತಿ ರಾಜೇಶ್ವರಿ, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ (ರಿ.), ಸಂಚಾಲಕರಾದ ಶ್ರೀ ಪ್ರಕಾಶ್ ಗೌಡ, ಅಪ್ರಮೇಯ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದ ಯಶಸ್ಸಿಗೆ ದ.ಕ. ಜಿಲ್ಲಾ ಗ್ಯಾರೇಜು ಮಾಲಕರ ಸೇವಾ ಟ್ರಸ್ಟ್ (ರಿ.), ಬೆಳ್ತಂಗಡಿ ವಲಯ, ವಿಶ್ವಕರ್ಮ ಸಹಕಾರ ಬ್ಯಾಂಕ್ ಲಿ., ಉಜಿರೆ ಶಾಖೆ, ಭರೂಕ ಪವರ್ ಪ್ರಾಜೆಕ್ಟ್ ನಿಡ್ಲೆ, ಯುವ ವೇದಿಕೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ ಉಜಿರೆ, ಮಹಿಳಾ ವೇದಿಕೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ ಉಜಿರೆ, ಶ್ರೀ ಉಮಾಮಹೇಶ್ವರ ಭಜನಾ ಮಂಡಳಿ ಕಿರಿಯಾಡಿ, ಗೌಡರ ಯಾನೆ ಒಕ್ಕಲಿಗರ ಸೇವಾ ಸಂಘ ಗ್ರಾಮ ಸಮಿತಿ ಬೆಳಾಲು, ಸರಸ್ವತಿ ಭಜನಾ ಮಂಡಳಿ ವಿವೇಕಾನಂದ ನಗರ, ಉಜಿರೆ ಶಿವ ಪಾರ್ವತಿ ಮಹಿಳಾ ಭಜನಾ ಮಂಡಳಿ ಚಾಮುಂಡಿಬೆಟ್ಟ, ಓಡಲ, ಕೂಟ ಮಹಾಜಗತ್ತು ಅಂಗಸಂಸ್ಥೆ, ಬೆಳ್ತಂಗಡಿ, ವರ್ತಕರ ಸಂಘ ಉಜಿರೆ, ವನದುರ್ಗಾ ಸ್ಪೋರ್ಟ್ಸ್ ಕ್ಲಬ್ ಬರೆಂಗಾಯ,ನಿಡ್ಲೆ, ಬೆಳ್ತಂಗಡಿ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘ, ಭಾರತ್ ಆಟೋ ಕಾರ್ಸ್ ಪ್ರೈ. ಲಿ., ಉಜಿರೆ, ಭಕ್ತ ಕುಂಬಾರರ ಸಂಘ ಗಾಂಧಿನಗರ, ಉಜಿರೆ, ಶ್ರೀ ಶಾರದಾ ಸೇವಾ ಟ್ರಸ್ಟ್ (ರಿ.), ಉಜಿರೆ, ಪ್ರಗತಿ ಮಹಿಳಾ ಮಂಡಲ (ರಿ.), ಉಜಿರೆ, ಪರಶುರಾಮ ಫ್ರೆಂಡ್ಸ್ ಮೂಲಾರ್, ಹವ್ಯಕ ವಲಯ, ಉಜಿರೆ, ಪ್ರಗತಿ ಯುವಕ ಮಂಡಲ (ರಿ.), ಮಾಚಾರು, ಸುಜ್ಞಾನ ನಿಧಿ ಯೋಜನೆ, ಬದನಾಜೆ ಶಾಲೆ, ಮಿತ್ರ ಯುವಕ ಮಂಡಲ, ಅರಳಿ, ಶ್ರೀ ಆದಿಶಕ್ತಿ ಫ್ರೆಂಡ್ಸ್, ಮಲೆಬೆಟ್ಟು, ಉಜಿರೆ ಮೈತ್ರಿ ಫ್ರೆಂಡ್ಸ್ ಕ್ಲಬ್ ಸಹಕರಿಸಿದ್ದಾರೆ.

ಕಾರ್ಯಕ್ರಮದಲ್ಲಿ ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ(ರಿ.), ಅಧ್ಯಕ್ಷರಾದ ಶ್ರೀ ಶೇಖರ ಗೌಡ ವಿದ್ಯಾನಗರ ಸ್ವಾಗತಿಸಿ, ಶ್ರೀ ಬಾಲಕೃಷ್ಣ ಕೊರಮೇರು ನಿರೂಪಿಸಿ, ದ.ಕ ವೃತ್ತಿ ನಿರತ ಔಷಧಿ ತಜ್ಞರ ಸಂಘ(ರಿ.), ಕಾರ್ಯದರ್ಶಿಗಳಾದ ಶ್ರೀ ಶ್ರೀಧರ ಕೆ. ವಿ ಧನ್ಯವಾದವಿತ್ತರು. ಶಿಬಿರದಲ್ಲಿ ಒಟ್ಟು 97 ಯೂನಿಟ್ಸ್ ರಕ್ತ ಸಂಗ್ರಹಿಸಲಾಯಿತು.

# ಧರ್ಮಸ್ಥಳದಲ್ಲಿ ಸಂಪನ್ನಗೊಂಡ 35ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ



**ಧರ್ಮಸ್ಥಳ (ಜ. 19):** ಗ್ರಾಮ ಪಂಚಾಯತ್ ಧರ್ಮಸ್ಥಳ ಮಾನ್ವಿಶ್ರೀ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಮಹಿಳಾ ಒಕ್ಕೂಟ(ರಿ.), ಕನ್ಯಾಡಿ ಸೇವಾಭಾರತಿ ಹಾಗೂ ಶ್ರೀ ದುರ್ಗಾ ಮಾತೃ ಮಂಡಳಿ ಇದರ ಸಹಭಾಗಿತ್ವದಲ್ಲಿ ಸ್ವ- ಸಹಾಯ ಸಂಘದ ಮಹಿಳೆಯರಿಗಾಗಿ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಜನವರಿ 19 ರಂದು ಧರ್ಮಸ್ಥಳ ಗ್ರಾಮ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ನಡೆಯಿತು.

ಮಾನ್ವಿಶ್ರೀ ಸಂಜೀವಿನಿ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಧನಲಕ್ಷ್ಮೀ ಮಾತನಾಡಿ, ಟೈಲರಿಂಗ್ ಕಲಿಯುವುದರಿಂದ ಬೇರೆ ಬೇರೆ ರೀತಿಯ ಸ್ವ - ಉದ್ಯೋಗದ ಅವಕಾಶವಿರುತ್ತದೆ. ಕಲಿತ ವಿದ್ಯೆ ಎಂದಿಗೂ ನಮಗೆ ಶಾಶ್ವತ ಮಹಿಳೆಯರು ಯಾವತ್ತಿಗೂ ಇನ್ನೊಬ್ಬರಿಗೆ ಅವಲಂಬಿತವಾಗದೆ ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯ. ಕಲಿತಂತ ವಿದ್ಯೆಯನ್ನು ಅರ್ಧಕ್ಕೆ ಕೈ ಬಿಡದೆ ಮುಂದುವರಿಸಿಕೊಂಡು ಹೋಗುವಂತೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ವಿಮಲ, ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಪಿ ಶ್ರೀನಿವಾಸ್ ರಾವ್, ಪಿಡಿಓ ಶ್ರೀಮತಿ ಗಾಯತ್ರಿ, ಕನ್ಯಾಡಿ ಸೇವಾಭಾರತಿ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ, ಶ್ರೀ ದುರ್ಗಾ ಮಾತೃ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಮಮತಾ, ಕೌಶಲ್ಯ ವಲಯ ಮೇಲ್ವಿಚಾರಕರು ಶ್ರೀಮತಿ ವೀಣಾಶ್ರೀ ಕೆ.ಕೆ, ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀಮತಿ ವಸಂತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 32 ಮಂದಿ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಸುಮತಿ ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ಟೈಲರಿಂಗ್ ಶಿಬಿರಾರ್ಥಿಗಳ ಪರವಾಗಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

LCRP ಶ್ರೀಮತಿ ಪುಷ್ಪಾವತಿ ಸ್ವಾಗತಿಸಿ, ಮಾನ್ವಿಶ್ರೀ ಒಕ್ಕೂಟದ MBK ಶ್ರೀಮತಿ ಚಂದ್ರಾವತಿ ಕಾರ್ಯಕ್ರಮ ನಿರೂಪಿಸಿ, ಪಶು ಸಖಿ ಶ್ರೀಮತಿ ಯಶೋಧ ಧನ್ಯವಾದವಿತ್ತರು.

# ಕನ್ಯಾಡಿ ಸೇವಾಭಾರತಿಯಿಂದ ದ.ಕ ಜಿಲ್ಲೆಯ ಜಿಲ್ಲಾಧಿಕಾರಿ ಭೇಟಿ



**ಮಂಗಳೂರು (ಜ. 06)** ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಶ್ರೀ ದರ್ಶನ್ ಎಚ್. ವಿ ರವರನ್ನು ಸೇವಾಭಾರತಿ ತಂಡ ಜನವರಿ 06 ರಂದು ಭೇಟಿ ನೀಡಲಾಯಿತು. ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಮಾಹಿತಿ ನೀಡಿ ವಿಕಲಚೇತನರ ಸಬಲೀಕರಣದ ಕುರಿತು ಕುಂದು ಕೊರತೆ ಸಭೆಯನ್ನು ಆಯೋಜಿಸುವ ಬಗ್ಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿಯ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.

# ಆಯುಷ್ಮಾನ್ ಸ್ವಾಸ್ಥ್ಯ ಸೇವಾ ಟ್ರಸ್ಟ್ ಉದ್ಘಾಟನೆ – ಸೇವಾಧಾಮದ 10 ಮಂದಿ ಫಲಾನುಭವಿಗಳಿಗೆ ಸಾಧನ ಸಲಕರಣೆಗಳಿಗೆ ದೇಣಿಗೆ ಹಸ್ತಾಂತರ





**ಮಂಗಳೂರು(ಜ.03):** ಮಂಗಳೂರು ಆಯುಷ್ಮಾನ್ ಸ್ವಾಸ್ಥ್ಯ ಸೇವಾ ಟ್ರಸ್ಟ್ (ರಿ.), ಇದರ ಉದ್ಘಾಟನಾ ಸಮಾರಂಭದ ವೇಳೆ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಅರವಿಂದ್ ಭಟ್, ಕಾರ್ಯದರ್ಶಿ ಶ್ರೀ ಸುಪ್ರೀಂ ಬಿ. ಎಂ ಹಾಗೂ ಟ್ರಸ್ಟಿ ಶ್ರೀಮತಿ ಆಶಾ ಕೆ. ಭಟ್ ರವರು ಟ್ರಸ್ಟ್‌ನ ವತಿಯಿಂದ ಸೇವಾಧಾಮದ ಹತ್ತು ಮಂದಿ ಫಲಾನುಭವಿಗಳಿಗೆ ಮೆಡಿಕಲ್ ಕಿಟ್, ಸೆಲ್ಫ್ ಕೇರ್ ಕಿಟ್, ವಾಕರ್ ಮತ್ತು ನೀರಿನ ಹಾಸಿಗೆಗಳಿಗೆ ರೂ. 30,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ, ಉತ್ತರ ಕನ್ನಡ ಕ್ಷೇತ್ರ ಸಂಯೋಜಕರಾದ ಶ್ರೀ ಸುಧಾಕರ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರರವರು ದೇಣಿಗೆಯನ್ನು ಸ್ವೀಕರಿಸಿ, ಸಂಸ್ಥೆಯ ಪರವಾಗಿ ಧನ್ಯವಾದವಿತ್ತು ಮುಂದಿನ ದಿನಗಳಲ್ಲಿ ಇನ್ನಷ್ಟು ಸೇವಾ ಕಾರ್ಯಗಳನ್ನು ಮಾಡುವ ಯಶಸ್ಸು ನಿಮ್ಮದಾಗಲಿ ಎಂದು ಶುಭಹಾರೈಸಲಾಯಿತು.

## ವೇಣೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 25,000/- ದೇಣಿಗೆ.



**ವೇಣೂರು (ಜ. 02):** ವೇಣೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 25,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಜಯಂತ್ ಪೂಜಾರಿಯವರು ಸೇವಾಭಾರತಿಯ ಟ್ರಸ್ಟಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರಿಗೆ ದೇಣಿಗೆಯನ್ನು ಹಸ್ತಾಂತರಿಸಿದರು.

## ಹುಟ್ಟು ಹಬ್ಬದ ಪ್ರಯುಕ್ತ ನೂತನ ಪುನಶ್ಚೇತನ ಕೇಂದ್ರಕ್ಕೆ ದೇಣಿಗೆ ಹಸ್ತಾಂತರ




**ಬೆಳ್ತಂಗಡಿ (ಜ. 02):** ರೋ। ಯಶವಂತ್ ಪಟವರ್ಧನ್ ರವರ ಹುಟ್ಟುಹಬ್ಬದ ಪ್ರಯುಕ್ತ, ಕನ್ಯಾಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕಾಗಿ ₹15,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ದೇಣಿಗೆಯನ್ನು ಶ್ರೀ ಯಶವಂತ್ ಪಟವರ್ಧನ್ ಮತ್ತು ಅವರ ಪುತ್ರಿ ಡಾ. ಮುಕ್ತಾ ಪಟವರ್ಧನ್ ರವರು ಸೇವಾಭಾರತಿಯ ಟ್ರಸ್ಟಿ ಶ್ರೀ ಜಯರಾಜ್ ಸಾಲ್ಯಾನ್ ಕಾನರ್ಪ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರಿಗೆ ಹಸ್ತಾಂತರಿಸಿದರು. ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

ಈ ಸಂದರ್ಭದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷರಾದ ರೋ। ಡಾ. ಪ್ರಕಾಶ್ ಪ್ರಭು ರೋ। ಶ್ರೀ ಸಂದೇಶ್ ರಾವ್, ಶ್ರೀ ವಿದ್ಯಾಕುಮಾರ್ ಕಾಂಚೋಡು ಮತ್ತು ಶ್ರೀ ಪ್ರವೀಣ್ ಗೊರೆ ಉಪಸ್ಥಿತರಿದ್ದರು.

## ಬೀಡಿ ಮಜ್ದೂರ್ ಸಂಘದಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 50,000/- ದೇಣಿಗೆ ದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 10,00,000/- ದೇಣಿಗೆ



**ಮಂಗಳೂರು (ಜ. 6):** ಬೀಡಿ ಮಜ್ದೂರ್ ಸಂಘದ ಅಧ್ಯಕ್ಷರಾದ ಶ್ರೀ ವಿಶ್ವನಾಥ್ ಶೆಟ್ಟಿ ಹಾಗೂ BMS ನ ಜಿಲ್ಲಾ ಕಾರ್ಯದರ್ಶಿ ಶ್ರೀ ಗೋಪಾಲಕೃಷ್ಣ ರವರು ಸಂಘದ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ರೂ. 50,000/- ದೇಣಿಗೆಯನ್ನು ನೀಡಿ ಸಹಕರಿಸಿರುತ್ತಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಭಾಗ ಪ್ರಚಾರಕರಾದ ಶ್ರೀ ಸುರೇಶ್ ಜಿ, ಮಂಗಳೂರು ಸೇವಾಭಾರತಿಯ ಪ್ರಾಂತ ಸಂಯೋಜಕರಾದ ಶ್ರೀ ಚೆನ್ನಯ್ಯ ಸ್ವಾಮಿ ಹಾಗೂ ಕನ್ಯಾಡಿ ಸೇವಾಭಾರತಿ ಟ್ರಸ್ಟಿ ಶ್ರೀ ಪೃಥ್ವೀಶರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು..

## ಶ್ರೀಮತಿ ವಿ. ಆರ್. ಶಾರದ ರವರ ಸ್ಮರಣಾರ್ಥವಾಗಿ ಸೇವಾಧಾಮಕ್ಕೆ ಗಾಲಿಕುರ್ಚಿ ಹಸ್ತಾಂತರ



**ಕನ್ಯಾಡಿ (ಜ. 16):** ಶ್ರೀಮತಿ ವಿ. ಆರ್. ಶಾರದ ರವರ ಸ್ಮರಣಾರ್ಥವಾಗಿ, ಅವರ ಮಗನಾದ ಡಾ. ಎಸ್. ಆರ್. ಶ್ರೀಹರಿರವರು ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಗಾಲಿಕುರ್ಚಿಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಭಾರತಿಯ ಸಿಬ್ಬಂದಿ ವರ್ಗದವರು ಗಾಲಿಕುರ್ಚಿಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಶ್ರೀ ರಮೇಶ್ ಎಚ್ ಎಸ್ ರವರಿಂದ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ದೇಣಿಗೆ



**ನಾರಾವಿ (ಡಿ. 09):** ರಾಷ್ಟ್ರೀಯ ಸ್ವಯಂಸೇವಕ ಸಂಘದ ಶ್ರೀ ರಮೇಶ್ ಎಚ್.ಎಸ್ ರವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜನವರಿ 19 ರಂದು ಭೇಟಿ ನೀಡಿ ಸೇವಾಧಾಮ ಮಾಡುವ ಕಾರ್ಯ ಚಟುವಟಿಕೆಗಳಿಗೆ ರೂ. 1000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣರವರು ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.


## ಕನ್ಯಾಡಿ ಸೇವಾಭಾರತಿಯಿಂದ ಲಯನ್ಸ್ ಕ್ಲಬ್ ನ ಜಿಲ್ಲಾ ಗವರ್ನರ್ ಭೇಟಿ.




**ಉಡುಪಿ (ಜ. 22):** ಲಯನ್ಸ್ ಡಿಸ್ಟ್ರಿಕ್ಟ್ 317C ಜಿಲ್ಲಾ ಗವರ್ನರ್ ಲ| ಸ್ವಪ್ನ ಸುರೇಶ್ ರವರನ್ನು ಸೇವಾಭಾರತಿ ತಂಡ ಜನವರಿ 22 ರಂದು ಭೇಟಿ ಮಾಡಲಾಯಿತು. ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಮಾಹಿತಿ ನೀಡಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುವಂತೆ ಮನವಿ ಮಾಡಲಾಯಿತು. ಜಿಲ್ಲಾ ಗವರ್ನರ್ ರವರು ಸಹಕರಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಶ್ರೀ ದುರ್ಗಾ ಮಾತೃ ಮಂಡಳಿಯ ಸದಸ್ಯರಾದ ಶ್ರೀಮತಿ ಶಾಂತ ಪಿ ಶೆಟ್ಟಿ, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾಭಾರತಿಯಿಂದ ಬಡಗಬೆಟ್ಟು ಸೊಸೈಟಿಯ ಅಧ್ಯಕ್ಷರ ಭೇಟಿ



**ಉಡುಪಿ (ಜ. 22):** ಬಡಗಬೆಟ್ಟು ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿಯವರನ್ನು ಸೇವಾಭಾರತಿ ತಂಡ ಜನವರಿ 22 ರಂದು ಭೇಟಿ ಮಾಡಲಾಯಿತು. ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಮಾಹಿತಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿಯ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಶ್ರೀ ದುರ್ಗಾಮಾತೃ ಮಂಡಳಿಯ ಸದಸ್ಯರಾದ ಶ್ರೀಮತಿ ಶಾಂತಾ ಪಿ ಶೆಟ್ಟಿ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.

## ಶ್ರೀ ನಿತ್ಯನೂತನ ಭಜನ ಮಂದಿರದಿಂದ ಗಾಲಿಕುರ್ಚಿ ಹಸ್ತಾಂತರ



**ಧರ್ಮಸ್ಥಳ (ಜ. 23):** ಶ್ರೀ ನಿತ್ಯನೂತನ ಭಜನ ಮಂದಿರ (ರಿ), ಜೋಡುಸ್ಥಾನದಲ್ಲಿ ನಡೆದ 25ನೇ ವರ್ಷದ ಸಾಮೂಹಿಕ ಸತ್ಯನಾರಾಯಣ ಪೂಜೆಯ ಸಂದರ್ಭದಲ್ಲಿ ಮಂಡಳಿಯ ಪರವಾಗಿ ಧರ್ಮಸ್ಥಳದ ಪೂಜ್ಯ ಶ್ರೀ ಡಿ. ಹರ್ಷೇಂದ್ರ ಕುಮಾರ್ ರವರು ಸೇವಾಧಾಮದ ಫಲಾನುಭವಿ ಶ್ರೀ ವಿಶ್ವನಾಥ ರವರಿಗೆ ಗಾಲಿಕುರ್ಚಿಯನ್ನು ಹಸ್ತಾಂತರಿಸಿದರು. ಭಜನ ಮಂಡಳಿಯ ಅಧ್ಯಕ್ಷರಿಗೆ ಹಾಗೂ ಸರ್ವ ಸದಸ್ಯರಿಗೆ ಸೇವಾಭಾರತಿ ಸಂಸ್ಥೆಯ ವತಿಯಿಂದ ಧನ್ಯವಾದಗಳನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ ಹಾಗೂ ಸೇವಾಧಾಮ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿ ಉಪಸ್ಥಿತರಿದ್ದರು.

## ಸೇವಾನಿಕೇತನದಲ್ಲಿ ವಾರದ ಭಜನೆ



ಶ್ರೀ ಷಣ್ಮುಖ ಭಜನ ಮಂಡಳಿ,
ನಾರ್ಯ - ಧರ್ಮಸ್ಥಳ



ಮಕ್ಕಳ ಕುಣಿತ ಭಜನಾ ತಂಡ ಚಿರಂಜೀವಿ
ಯುವಕ ಮಂಡಲ, ಕಾನರ್ಪ




ಭಕ್ತಪ್ರಿಯ ಭಜನಾ ತಂಡ, ಕನ್ಯಾಡಿ



ಕೀರ್ತನಾ ಕಲಾ ತಂಡ, ಮುಂಡಾಜೆ (ಭಕ್ತಿ-ಗಾನ ಯಕ್ಷ-ನೃತ್ಯ)

# "ಪುನಶ್ಚೇತನದ ಹಾದಿಯಲ್ಲಿ ಚೈತನ್ಯ ತುಂಬುವ ಸೇವಾಧಾಮ!"















# ಸೇವಾಸಂಗಮ



ಜನವರಿ ತಿಂಗಳ ಸೇವಾಸಂಗಮ ಆನ್ ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಡಾ. ಮೈತ್ರೇಯಿ ಪಾಟೀಲ್ ರವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಅನಿರೀಕ್ಷಿತ ಹವಮಾನದ ಸಮಯದಲ್ಲಿ ಆರೋಗ್ಯವನ್ನು ಹೇಗೆ ಕಾಳಜಿ ವಹಿಸುವುದು ಎಂಬುದರ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಒಟ್ಟು 75 ಮಂದಿ ಭಾಗವಹಿಸಿದ್ದರು

## ಉಜಿರೆಯ ಪ್ರಕಾಶ್ ಬಿ. ಕೆ ರವರಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ. 25,000/- ದೇಣಿಗೆ



**ಕನ್ಯಾಡಿ (ಜ. 29):** ಉಜಿರೆಯ ಶ್ರೀ ಪ್ರಕಾಶ್ ಬಿ. ಕೆ ರವರು ಕನ್ಯಾಡಿ ಸೇವಾನಿಕೇತನಕ್ಕೆ ಜನವರಿ 29 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 25,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ, ದಕ್ಷಿಣ ಕನ್ನಡ ಹಾಗೂ ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಬೈಂದೂರು ಉತ್ಸವ – 2026ರಲ್ಲಿ ಸೇವಾಭಾರತಿ ತಂಡ ಭಾಗವಹಿಸುವಿಕೆ



ಬೈಂದೂರು ತಾಲೂಕಿನ ಮಾನ್ಯ ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆಯವರ ಪರಿಕಲ್ಪನೆಯಲ್ಲಿ ಆಯೋಜಿಸಲಾದ ಬೈಂದೂರು ಉತ್ಸವ – 2026 ಕಾರ್ಯಕ್ರಮದಲ್ಲಿ ಸೇವಾಭಾರತಿ ತಂಡ ಭಾಗವಹಿಸಿತು. ಉತ್ಸವದ ಅಂಗವಾಗಿ ಸಂಸ್ಥೆಯ ಮಳಿಗೆಯನ್ನು ತೆರೆಯಲಾಗಿದ್ದು, ಸಂಸ್ಥೆಯ ಕರಪತ್ರ, ವಾರ್ಷಿಕ ವರದಿ ಹಂಚಿ, ಸಂಸ್ಥೆಯ ವಿವಿಧ ಯೋಜನೆಗಳ ಸೇವಾ ಕಾರ್ಯಗಳ ಬಗ್ಗೆ ಜನರಿಗೆ ಮಾಹಿತಿ ನೀಡಲಾಯಿತು.

ಬೈಂದೂರು ಉತ್ಸವದಲ್ಲಿ ಸಂಸ್ಥೆಯ ಖಜಾಂಚಿ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರನ್ನು ಸಂಸ್ಥೆಯ ತಂಡದೊಂದಿಗೆ ಗೌರವಿಸಲಾಯಿತು.

ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆಯವರಿಗೆ ಹಾಗೂ ಬೈಂದೂರು ಉತ್ಸವದ ಪದಾಧಿಕಾರಿಗಳಿಗೆ ಸೇವಾಭಾರತಿ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

# ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯಿಂದ 2 ಗಾಲಿಕುರ್ಚಿ ಕೊಡುಗೆ






**ಉಡುಪಿ (ಜ. 22):** ಸೇವಾಭಾರತಿ ತಂಡವು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆಯ ಸಭಾಪತಿ ಶ್ರೀ ಬಸ್ರೂರು ರಾಜೀವ್ ಶೆಟ್ಟಿಯವರನ್ನು ಜನವರಿ 22 ರಂದು ಭೇಟಿ ಮಾಡಿ, ಸೇವಾಭಾರತಿಯ ಸೇವಾ ಕಾರ್ಯಗಳನ್ನು ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನಕ್ಕಾಗಿ ಸೇವಾಧಾಮದಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಅಗತ್ಯವಿರುವ ದಿವ್ಯಾಂಗರಿಗೆ ಗಾಲಿಕುರ್ಚಿಗಳ ಸಹಾಯವನ್ನು ನೀಡುವಂತೆ ಮನವಿ ಮಾಡಲಾಯಿತು.

ಮನವಿಗೆ ಸ್ಪಂದಿಸಿದ ಕರ್ನಾಟಕ ರಾಜ್ಯ ಶಾಖೆಯ ಸಭಾಪತಿ ಶ್ರೀ ಬಸ್ರೂರು ರಾಜೀವ್ ಶೆಟ್ಟಿ ಹಾಗೂ ಸಂಘದ ಸದಸ್ಯರು, ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಎರಡು ಗಾಲಿಕುರ್ಚಿಗಳನ್ನು ಕೊಡುಗೆಯಾಗಿ ನೀಡಿ ಸಹಕರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಶ್ರೀ ದುರ್ಗಾ ಮಾತೃ ಮಂಡಳಿಯ ಸದಸ್ಯರಾದ ಶ್ರೀಮತಿ ಶಾಂತಾ ಪಿ. ಶೆಟ್ಟಿ ಹಾಗೂ ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಗಾಲಿಕುರ್ಚಿಗಳನ್ನು ಸ್ವೀಕರಿಸಿ, ಸಂಸ್ಥೆಯ ಪರವಾಗಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು

# ಸಹಾಯ ಹಸ್ತ – ಸೇವಾಧಾಮದಿಂದ ಪುನಶ್ಚೇತನಗೊಂಡ ದಿವ್ಯಾಂಗರಿಂದ ಮಾರಾಟ ಮಳಿಗೆ ಯೋಜನೆ





ಶಿರಸಿಯಲ್ಲಿ ಜನವರಿ 22 ರಿಂದ 26 ರವರೆಗೆ ಶಿರಸಿ ರೋಟರಿ ಕ್ಲಬ್ ಆಯೋಜಿಸಿದ ಆಹಾರ ಮೇಳ ಹಾಗೂ ಆಲೆಮನೆ ಉತ್ಸವ - 2026 ಕಾರ್ಯಕ್ರಮದಲ್ಲಿ ಉತ್ತರಕನ್ನಡ ಜಿಲ್ಲೆಯ ದಿವ್ಯಾಂಗರ ನೇತೃತ್ವದಲ್ಲಿ ಸೇವಾಧಾಮದಿಂದ ಪುನಶ್ಚೇತನಗೊಂಡ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ತಯಾರಿಸಿದ ವಿವಿಧ ಕರಕುಶಲ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಮಳಿಗೆಯಲ್ಲಿ ದಿವ್ಯಾಂಗರಿಂದ ತಯಾರಿಸಲಾದ ಹತ್ತಿಯಿಂದ ಬತ್ತಿ, ಉಲ್ಲನ್ ಸ್ವೇಟರ್‌ಗಳು, ಬ್ಯಾಗ್‌ಗಳು, ಟೆಡ್ಡಿ, ಕೀ ಚೈನ್, ಕೌದಿ, ಬಾಗಿಲ ತೋರಣ, ಅರಿಶಿನಪುಡಿ, ರೊಟ್ಟಿ, ಹಣ್ಣು–ಹೂವಿನ ಬುಟ್ಟಿ, ಫ್ಲೋರ್ ಮ್ಯಾಟ್, ಜೋಕಾಲಿ ಮುಂತಾದ ವಿವಿಧ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಲಾಯಿತು. ಉತ್ಸವದ ಭಾಗವಾಗಿ ಮಿರ್ಚಿ ಮಂಡಕ್ಕಿ ಸ್ಟಾಲ್ ಕೂಡ ಆಯೋಜಿಸಲಾಗಿದ್ದು, ಐದು ದಿನಗಳ ಅವಧಿಯಲ್ಲಿ ಸುಮಾರು ₹40,000ರ ವ್ಯಾಪಾರ ನಡೆಯಿತು. ಇದು ಕಾರ್ಯಕ್ರಮದ ಯಶಸ್ಸಿನೊಂದಿಗೆ ದಿವ್ಯಾಂಗರ ಆತ್ಮವಿಶ್ವಾಸದ ಸ್ಪಷ್ಟ ಉದಾಹರಣೆಯಾಗಿದೆ.

ಉತ್ಸವದ ಸಂದರ್ಭದಲ್ಲಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಹಾಗೂ ಶಿರಸಿ–ಸಿದ್ದಾಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಭೀಮಣ್ಣ ಟಿ. ನಾಯ್ಕ್ ರವರು ಮಳಿಗೆಯನ್ನು ಭೇಟಿ ನೀಡಿ ಸೇವಾಭಾರತಿಯ ಕಾರ್ಯವನ್ನು ಮೆಚ್ಚಿದರು. ಜೊತೆಗೆ ಶಿರಸಿ ರೋಟರಿ ಕ್ಲಬ್‌ನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಹಾಗೂ ಸೇವಾಭಾರತಿ ಸಂಸ್ಥೆಯು ಶಿರಸಿಯಲ್ಲಿ ಆಯೋಜಿಸಿದ ವೈದ್ಯಕೀಯ ಶಿಬಿರಕ್ಕೆ ಸಹಕರಿಸಿದ್ದ ಡಾ. ದಿನೇಶ್ ಹೆಗ್ಡೆ, ಡಾ. ಸುಮನ್ ಹೆಗ್ಡೆ, ಡಾ. ಕೈಲಾಶ್ ಪೈ, ಶ್ರೀ ಮಹೇಶ್ ತೆಲಂಗ, ಶ್ರೀ ರವಿ ಹೆಗ್ಡೆ,ಗಡಿಹಳ್ಳಿ, ಡಾ. ರೋಹಿತ್ ಹೆಗ್ಡೆ, ಡಾ. ರಾಯ್ಸದ್ ಮತ್ತು ಡಾ. ವಿನಯ ಹೆಗ್ಡೆ ಮುಂತಾದವರು ಮಳಿಗೆಯನ್ನು ಸಂದರ್ಶಿಸಿದರು.

ಉತ್ಸವಕ್ಕೆ ಆಗಮಿಸಿದ ಜನಸಮೂಹದ ನಡುವೆ ಸೇವಾಭಾರತಿ ಸಂಸ್ಥೆಯ ಉದ್ದೇಶಗಳು, ಸೇವಾಧಾಮದಲ್ಲಿ ನಡೆಯುವ ದಿವ್ಯಾಂಗರ ಪುನಶ್ಚೇತನ ಕಾರ್ಯಗಳು ಹಾಗೂ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಮೂಡಿಸಲಾಯಿತು.

## ಜನವರಿ ತಿಂಗಳ ಸೇವಾ ಕಾರ್ಯಗಳು:

- **ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್** - 30
- **ಕೇಂದ್ರದಲ್ಲಿರುವ ಸನಿವಾಸಿಗಳು** - 07
- **ವಾಟರ್ ಬೆಡ್** - 01
- **ವಾಕರ್ ವಿತರಣೆ** - 01
- **ಹೊಸ ಗುರುತಿಸುವಿಕೆ** - 04
- **ಗಾಲಿಕುರ್ಚಿ ವಿತರಣೆ** - 02

## ಮಹನೀಯ ದಾನಿಗಳು

- ಶ್ರೀ ಯಶವಂತ್ ಭಟ್ ಪಟವರ್ಧನ್, ಬೆಳ್ತಂಗಡಿ
- ಶ್ರೀಮತಿ ಕಾವ್ಯಾರಾಣಿ ಭಟ್, ದೇರೆಬೈಲ್
- ಶ್ರೀ ಎಲ್ ಗುರಪ್ಪ ನಾಯ್ಡು, ಬೆಂಗಳೂರು
- ಶ್ರೀಮತಿ ಪ್ರೇಮ ಆರ್ ಹೆಗ್ಡೆ, ಧರ್ಮಸ್ಥಳ
- ಶ್ರೀ ನಿತಿನ್ ಪ್ರದೀಪ್, ಕೊಡಿಯಾಲಬೈಲ್
- ಶ್ರೀ ರಾಘವೇಂದ್ರ ನಾಯಕ್ ಬರ್ಗುಳ, ಶಿಬಾಜೆ
- ಶ್ರೀ ಸುಕ್ಷಿತ್ ಕುಮಾರ್ ಬಿ ಎಮ್, ಕಡಿರುದ್ಯಾವರ
- ಶ್ರೀ ಸಿದ್ಧಾಂತ್ ರೈ, ಬೆಂಗಳೂರು
- ಡಾ ಲೋಕೇಶ್ ರಾವ್ ಬಿ ಕೆ, ಉಡುಪಿ
- ಶ್ರೀ ಪ್ರಕಾಶ್ ಬಿ ಕೆ, ಉಜಿರೆ
- ಶ್ರೀ ರಮೇಶ್ ಹೆಚ್ ಎಸ್, ಹಾಸನ
- ಶ್ರೀಮತಿ ಸುಮಾ ಪಟವರ್ಧನ್, ಬೆಂಗಳೂರು
- ಡಾ. ಚೇತನ್,ಬೆಳಾಲು
- ಶ್ರೀ ಒ ಆರ್ ಎಲ್ಲಪ್ಪ, ಬೆಂಗಳೂರು
- ಶ್ರೀ ಬಾಬು ಎಮ್ ಕೆ, ಜೋಡುಸ್ಥಾನ
- ಶ್ರೀ ಜಯವಂತ ಪ್ರಭು, ಬೆಂಗಳೂರು
- ಶ್ರೀಮತಿ ಸುಗುಣ ಮುಕುಂದರಾಜು, ಬೆಂಗಳೂರು
- ಶ್ರೀ ಪ್ರದೀಪ್ ಕುಲಾಲ್, ಮೈಸೂರು
- ಶ್ರೀಮತಿ ಚೈತ್ರ ಎಂ, ಮಂಗಳೂರು
- ಶ್ರೀಮತಿ ಮಮತಾ ನಾಗರಾಜ್ ಹೊಳ್ಳ, ಉಜಿರೆ
- ಶ್ರೀ ರೋಹಿತ್ ಬಿ ಜೆ, ಬೆಂಗಳೂರು
- ಶ್ರೀ ನಿರಂಜನ್ ಕುಮಾರ್ ಬಿ, ಬೆಂಗಳೂರು
- ಶ್ರೀಮತಿ ಪ್ರಜ್ಞಾ ಶ್ರೀನಾಥ್ ಕುಲಾಲ್, ಅಳದಂಗಡಿ
- ಶ್ರೀಮತಿ ವಿಜಯ ಪಿ, ಕೆಮ್ಮಿಂಜೆ
- ಕು ಅಕ್ಷತಾ ಕುಲಾಲ್, ಬಂದಾರು
- ಶ್ರೀ ಗಣೇಶ್ ಗೌಡ, ಕೊಕ್ಕಡ
- ಶ್ರೀ ಬಿ ನವೀನಚಂದ್ರ, ಧರ್ಮಸ್ಥಳ
- ಶ್ರೀ ರಜತ್ ರಾವ್, ಧರ್ಮಸ್ಥಳ
- ಶ್ರೀ ಕಿರಣ್ ಕುಮಾರ್ ಬಿ ಎಸ್, ಬೆಂಗಳೂರು
- ಶ್ರೀಮತಿ ವಸಂತಿ ಗೌಡ, ಪಿಜತ್ತಡ್ಕ
- ಶ್ರೀ ಸುರೇಂದ್ರ ಕುಡ್ವ, ಉಜಿರೆ
- ಶ್ರೀಮತಿ ಮಾಳವಿಕಾ ಶ್ರೀನಿವಾಸ ರಾವ್, ಕೊಕ್ಕಡ
- ಕರ್ನಾಟಕ ರಾಜ್ಯ ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟ, ಹುಬ್ಬಳ್ಳಿ

## ಸೇವಾನಿಧಿ ದಾನಿಗಳು

- ಶ್ರೀ ಕೆ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
- ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
- ಶ್ರೀ ಅಣ್ಣು ದೇವಾಡಿಗ, ಧರ್ಮಸ್ಥಳ
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಬಿ ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀಮತಿ ಜಯಂತಿ ಪುರಂದರ, ಸೃಷ್ಟಿ
- ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀಮತಿ ಸವಿತಾ ಎಂ ರಾವ್, ಕನ್ಯಾಡಿ
- ಶ್ರೀ ಬಾಲಕೃಷ್ಣ ರಾವ್ ಕೆ, ಕನ್ಯಾಡಿ
- ಶ್ರೀ ಕೆ ಪುರಂದರ ರಾವ್, ಸೃಷ್ಟಿ
- ಶ್ರೀಮತಿ ರವಿಜಾ ಎಸ್ ರಾವ್, ಕನ್ಯಾಡಿ
- ಶ್ರೀ ಮಧ್ವರಾಜ್ ಎಂ ಜಿ, ಧರ್ಮಸ್ಥಳ
- ಶ್ರೀ ಗೌರಿಶಂಕರ್, ಧರ್ಮಸ್ಥಳ
- ಶ್ರೀ ಲಕ್ಷ್ಮೀನಾರಾಯಣ ರಾವ್,ಜೋಡುಸ್ಥಾನ
- ಶ್ರೀ ಭುವನೇಶ್, ಉಜಿರೆ
- ಶ್ರೀ ರಾಘವೇಂದ್ರ ತೇಜ, ತೆಲಂಗಾಣ
- ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
- ಹೋಟೆಲ್ ಬಾಂಬೆ ಡೈನ್, ಉಜಿರೆ
- ಶ್ರೀ ಕೆ ಸೂರ್ಯನಾರಾಯಣ ರಾವ್, ದೊಂಡೋಲೆ
- ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
- ಶ್ರೀ ಅಣ್ಣು ದೇವಾಡಿಗ, ಧರ್ಮಸ್ಥಳ
- ಶ್ರೀ ಮಧುಸೂಧನ್, ಉಜಿರೆ
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಶ್ರೀ ಜಯಾನಂದ ಎಂ, ಕನ್ಯಾಡಿ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಪ್ರಿಜೇಶ್, ಧರ್ಮಸ್ಥಳ
- ಶ್ರೀ ಸಂತೋಷ್, ಕೊಕ್ಕಡ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ನೀಲಪ್ಪ ಚೌಡಲವರ, ಕನ್ಯಾಡಿ
- ಶ್ರೀ ವಿಘ್ನೇಶ್ ಕುಡ್ವ, ಉಜಿರೆ
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ನೀಲಕಂಠ, ಧರ್ಮಸ್ಥಳ
- ಶ್ರೀ ಶಿವಕುಮಾರ್, ಉಜಿರೆ
- ಮಾಸ್ಟರ್ ಅದ್ವೈತ ಪೈ, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ ಎಸ್, ಕನ್ಯಾಡಿ

## ಸಂಘ ಸಂಸ್ಥೆಗಳು

- Mangalore Refinery and Petrochemicals Limited, Mangaluru
- New Mangalore Port Authority, Panamburu
- Sri kshethra dharmasthala Rural Development Project (Regd),Dharmasthala
- Azim Premji Philanthropic Initiatives Privare Limited, Bangalore
- ವೇಣೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ವೇಣೂರು
- ಅಯುಷ್ಮಾನ್ ಸ್ವಾಸ್ಥ್ಯ ಸೇವಾ ಟ್ರಸ್ಟ್(ರಿ.), ಮಂಗಳೂರು
- ಜಿ ಆರ್ ಕನ್ಸಲ್ಟಿಂಗ್, ಬೆಂಗಳೂರು
- ಮಚ್ಚಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಮಚ್ಚಿನ
- ಶ್ರೀ ನಿತ್ಯನೂತನ ಭಜನಾ ಮಂಡಳಿ, ಜೋಡುಸ್ಥಾನ

## ವಸ್ತು ರೂಪದಲ್ಲಿ ದೇಣಿಗೆ

- ಡಾ ಶ್ರೀಹರಿ, ಕನ್ಯಾಡಿ
- ಉಜಿರೆ ಹವ್ಯಕ ವಲಯ, ಉಜಿರೆ

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಜನವರಿ ತಿಂಗಳಲ್ಲಿ ಡಿಸ್ಚಾರ್ಜ್ ಆದವರು






**ಶ್ರೀ ಉಮೇಶ್, ಬೆಂಗಳೂರು** **ಶ್ರೀ ಪುತ್ತಬ್ಬ, ಪುತ್ತೂರು**

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ಲಿಖಿತ್ ಹೆಚ್ ಪಿ ನಾನು ಬೈಕ್ ಆಕ್ಸಿಡೆಂಟ್ ನಲ್ಲಿ ಕುತ್ತಿಗೆಗೆ ಪೆಟ್ಟು ಮಾಡಿಕೊಂಡು ಕೈಕಾಲು ಸ್ವಾಧೀನ ಕಳೆದುಕೊಂಡು ಶಸ್ತ್ರಚಿಕಿತ್ಸೆಯ ನಂತರ ಆರು ತಿಂಗಳು ಮನೆಯಲ್ಲಿಯೇ ಇದ್ದೆ. ನಂತರ ಸೇವಾಧಾಮದ ಪರಿಚಯವಾಗಿ ಸೆಪ್ಟೆಂಬರ್ 3 ಗೆ ನಾನು ಸೇವಾಧಾಮಕ್ಕೆ ಬಂದೆ. ಸೇವಾಧಾಮದಲ್ಲಿ ಹೇಳಿಕೊಡುವಂತಹ ಫಿಸಿಯೋಥೆರಪಿ ಬೇರೆ ಬೇರೆ ಚಟುವಟಿಕೆಗಳು ನನ್ನಲ್ಲಿ ಇನ್ನಷ್ಟು ಚೇತರಿಕೆಯನ್ನು ಮೂಡಿಸಿತು. ಸೇವಾಧಾಮದ ಸೇವೆ ನನ್ನ ಮನಸ್ಸಿನ ಚಿಂತೆಯನ್ನು ದೂರ ಮಾಡಿತು. ಇಲ್ಲಿ ಕಲಿಸಿಕೊಟ್ಟಂತಹ ಪ್ರತಿಯೊಂದು ವಿಷಯವನ್ನು ನಾನು ನನ್ನ ಮುಂದಿನ ದಿನಗಳಲ್ಲಿ ಅಳವಡಿಸಿಕೊಂಡು ಹೋಗುತ್ತೇನೆ. ಇಲ್ಲಿಯ ಎಲ್ಲಾ ಥೆರಪಿಸ್ಟುಗಳು ನನಗೆ ಒಳ್ಳೆಯ ಥೆರಪಿಯನ್ನು ನೀಡಿದ್ದಾರೆ. ಹಾಗೆ ಪ್ರತಿಯೊಂದು ವಿಷಯದಲ್ಲಿ ಒಳ್ಳೆಯ ಮಾರ್ಗದರ್ಶನವನ್ನು ನೀಡಿರುತ್ತಾರೆ. ಸೇವಾಧಾಮದ ಈ ಸೇವೆಗೆ ನನ್ನ ಹೃತ್ಪೂರ್ವಕ ವಂದನೆಗಳು.

**ಲಿಖಿತ್ ಹೆಚ್ ಪಿ,ಚಿಕ್ಕಮಗಳೂರು**

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ವೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ. 3,05,72,580/-ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್ ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ. ಅಲ್ಲದೆ ಮಂಗಳೂರಿನ NMPA ಯ CSR ಅನುದಾನ (ರೂ. 25 ಲಕ್ಷ)ವು ಮಂಜೂರುಗೊಂಡಿರುವ ಪತ್ರ ಲಭ್ಯವಿದ್ದು ಮೊದಲ ಮಹಡಿಯ ನಿರ್ಮಾಣ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. Mani and Minoo ಟ್ರಸ್ಟ್ ನಿಂದ ಸಹಕಾರ ದೊರಕಿದೆ. ಹಾಗೆ LIC of INDIA ಮತ್ತು ಬೆಂಗಳೂರಿನ BEL ಕಂಪನಿಗೆ CSR ನಿಧಿಗಾಗಿ ಮನವಿಯನ್ನು ಸಲ್ಲಿಸಲಾಗಿದೆ. ಪ್ರಸ್ತುತ ನೆಲಮಹಡಿ ಮತ್ತು ಒಂದನೇ ಮಹಡಿಗೆ ಸಹಕಾರದ ಭರವಸೆಯಿದ್ದು ಉಳಿದ ಎರಡು ಮಹಡಿಗಳಿಗೆ ಬೇರೆ ಬೇರೆ CSR ,ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ

**ಪ್ರಸ್ತುತ ಮೊದಲ ಮಹಡಿಯ ಕಾಮಗಾರಿ ಪ್ರಾರಂಭಗೊಂಡಿದ್ದು, ಪಿಲ್ಲರ್ ಹಾಗೂ ಸ್ಲಾಬ್ ಕಾಮಗಾರಿ ಪೂರ್ಣಗೊಂಡಿದೆ. ಇದುವರೆಗೆ ಒಟ್ಟು ರೂ. 1,98,74,352/- ವೆಚ್ಚವಾಗಿದ್ದು, ಇನ್ನೂ ಮೂರು ಮಹಡಿಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಮುಂದಿನ ಹಂತದ ಕಾಮಗಾರಿ ಮುಂದುವರಿಸಲು ನಿಧಿಯ ಅವಶ್ಯಕತೆ ಇದ್ದು ದಾನಿಗಳ ಸಹಕಾರದ ನಿರೀಕ್ಷೆಯಲ್ಲಿ ನಾವಿದ್ದೇವೆ.**

ಸೇವೆಗಾಗಿ ವಸತಿ ( 12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ, ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

## BANK ACCOUNT DETAILS

SEVABHARATHI REGD

Scan and Pay also

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**


**ಶ್ರೀ ಅವಿನಾಶ್ ಶೆಟ್ಟಿ** ಧರ್ಮಸ್ಥಳ


**ಶ್ರೀಮತಿ ಮಂಜುಳಾ ವಿ ಪ್ರಸಾಧ್,** ಉಡುಪಿ



**ರಾಜೇಶ್ ಫಡ್ಕೆ**


**ಕು| ಅಕ್ಷತಾ ಕುಲಾಲ್,** ಬಂದಾರು


**ಶ್ರೀ ಯಶವಂತ್ ಪಟವರ್ಧನ್,** ಬೆಳ್ತಂಗಡಿ


**ಬೇಬಿ ಅಹನ ಪಿ.ಎಸ್,** ವೇಣೂರು


**ಶ್ರೀಮತಿ ದಿವ್ಯ ಪುರಂದರ್,** ಬೆಂಗಳೂರು


**ಶ್ರೀಮತಿ ಪೂರ್ಣಿಮಾ ಕಿಣಿ,** ದೊಂಡೋಲೆ


**ಶ್ರೀ ಲಕ್ಷ್ಮೀನಾರಾಯಣ ಭಟ್,** ಪಾರ್ಪಿಕಲ್ಲು


**ಶ್ರೀಮತಿ ಚೈತ್ರ ಎಂ,** ಅಡ್ಯಾರ್


**ಶ್ರೀ ಪ್ರಸಾದ್ ಕುಲಾಲ್,** ಬಂದಾರು



**ಶ್ರೀ ಚರಿತ್ ಕುಮಾರ್ ಎಂ** ಪುತ್ತೂರು


**ಮಾಸ್ಟರ್ ಅದ್ವಿಕ್ ಭಟ್,** ಮಂಗಳೂರು


**ಶ್ರೀ ಡಿ ಎನ್ ಗಿರೀಶ್,** ಧರ್ಮಸ್ಥಳ


**ಶ್ರೀ ರಮಾನಂದ ಪೈ,** ಕನ್ಯಾಡಿ


**ಶ್ರೀ ಯು ಅಚ್ಚುತ ಗೌಡ ಮತ್ತು ಶ್ರೀಮತಿ ರೋಹಿಣಿ ಕೆ,** ಧರ್ಮಸ್ಥಳ


**ಶ್ರೀ ಗಣೇಶ್ ಗೌಡ ಮತ್ತು ಶ್ರೀಮತಿ ಹರ್ಷಿತಾ ಕಲ್ಯೆ,** ಕೊಕ್ಕಡ


**ಡಾ ಎ ಜಯಕುಮಾರ್ ಶೆಟ್ಟಿ, ಮತ್ತು ಶ್ರೀಮತಿ ನವೀನ,** ಉಜಿರೆ



**ಶ್ರೀಮತಿ ಪ್ರಜ್ಞಾ ಶ್ರೀನಾಥ್ ಕುಲಾಲ್**, ಮಿತ್ತರೋಡಿ



**ಶ್ರೀ ಪ್ರೀಜೇಶ್**, ಧರ್ಮಸ್ಥಳ



**ಶ್ರೀ ಗುರುಪ್ರಸಾದ್ ಟಿ**, ಬೆಳ್ತಂಗಡಿ



**ಶ್ರೀ ನಿತಿನ್ ಪ್ರದೀಪ್** ಮಂಗಳೂರು



**ಶ್ರೀಮತಿ ಜ್ಯೋತಿಲಕ್ಷ್ಮಿ ಎನ್**, ಕಿಲ್ಲೂರು



**ಡಾ| ದಿನೇಶ್ ಹೆಗ್ಡೆ ಮತ್ತು ಡಾ| ಸುಮನ್ ಹೆಗ್ಡೆ**, ಶಿರಸಿ



**ಶ್ರೀ ಪ್ರೀತಂ ರಾಜು** ಬೆಂಗಳೂರು



**ಶ್ರೀ ಸಿದ್ಧಾರ್ಥ್ ಜೈನ್ ಮತ್ತು ಶ್ರೀಮತಿ ನಿಖಿಲ ಎನ್ ಜೈನ್**, ಶಿರಸಿ

## ಪುಣ್ಯಸ್ಮರಣೆ



**ದಿ| ಜವರೇ ಗೌಡ**, ಪಿರಿಯಪಟ್ಟಣ



**ದಿ| ರತ್ನವರ್ಮ ಹೆಗ್ಗಡೆ**, ದಾರೆಗುಡ್ಡೆ



## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ

ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಜನವರಿ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರು ಡಾ| ವೈಶಾಕ್ ಬಿ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ದಿವ್ಯಾಂಗರನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 9 ಮಂದಿ ದಿವ್ಯಾಂಗರು ಭಾಗವಹಿಸಿದ್ದರು.

## ನಿಮಗಿದು ತಿಳಿದಿರಲಿ

### ಸ್ಪೈನಲ್ ಟ್ಯೂಮರ್‌ಗಳ ವಿಧಗಳು:

**ಸ್ವಭಾವದ ಆಧಾರದ ಮೇಲೆ (Based on Nature):**

◆ **ಬೆನೈನ್ (Benign) ಟ್ಯೂಮರ್‌ಗಳು**

- ಕ್ಯಾನ್ಸರ್ ಅಲ್ಲ.
- ನಿಧಾನವಾಗಿ ಬೆಳೆಯುತ್ತವೆ.
- ಚಿಕಿತ್ಸೆಗೆ ಉತ್ತಮ ಪ್ರತಿಕ್ರಿಯೆ ನೀಡುತ್ತವೆ.

ಉದಾ: Meningioma, Schwannoma

◆ **2. ಮ್ಯಾಲಿಗ್ನೆಂಟ್ (Malignant) ಟ್ಯೂಮರ್‌ಗಳು**

- ಕ್ಯಾನ್ಸರ್ ಸ್ವರೂಪದವು.
- ವೇಗವಾಗಿ ಬೆಳೆಯುತ್ತವೆ.
- ದೇಹದ ಬೇರೆ ಭಾಗಗಳಿಗೆ ಹರಡುವ (ಮೆಟಾಸ್ಟಾಸಿಸ್) ಸಾಧ್ಯತೆ ಇರುತ್ತದೆ.

ಉದಾ: Metastatic tumors

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6,000/ -ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10,000/ -ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

### Support us for constructions of Rehabilitation Centre

SEVABHARATHI REGD

237887292400920@cnrb

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಬೆನ್ನುಹುರಿ ಅಪಘಾತಗೊಂಡರೂ ಮತ್ತೆ ಕೈ ಹಿಡಿದ ಸರಕಾರಿ ಹುದ್ದೆ - ಕೃಷ್ಣ ಡಿ ಕಡೂರು



ಶ್ರೀ ಕೃಷ್ಣ ಡಿ ಅವರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಸಖರಾಯಪಟ್ಟಣ ಗ್ರಾಮದ ನಿವಾಸಿಯಾಗಿದ್ದು, 1 ಜೂನ್ 1976 ರಂದು ದಿ| ದೇವಪ್ಪ ಆಚಾರ್ಯ ಮತ್ತು ದಿ| ಶಾಂಭವಿ ದಂಪತಿಯ ಎಂಟನೇ ಪುತ್ರರಾಗಿ ಜನಿಸಿದರು. ನಂತರ ತನ್ನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಸ್ಥಳೀಯ ಶಾಲೆಯಲ್ಲೇ ಪೂರ್ಣಗೊಳಿಸಿದರು. ಆದರೆ ಜೀವನದ ಕಠಿಣ ವಾಸ್ತವಗಳು ಬೇಗನೆ ಬಾಗಿಲು ತಟ್ಟಿದವು ಮನೆಯ ಬಡತನದಿಂದಾಗಿ ಕೃಷ್ಣ ರವರು ತನ್ನ ಓದಿನ ಕನಸನ್ನು ಅರ್ಧ ದಾರಿಯಲ್ಲೇ ಬಿಟ್ಟುಬಿಡಬೇಕಾಯಿತು. ಓದುವ ಆಸೆ ಇದ್ದರೂ ಅಣ್ಣಂದಿರ ಜೊತೆಗೂಡಿ ಕುಟುಂಬದ ಪೋಷಣೆಗೆ ತೊಡಗಿಕೊಂಡ ಕೃಷ್ಣ ರವರು, ತಂದೆಯವರ ಪಾರಂಪರಿಕ ಮರದ ಕೆಲಸವನ್ನೇ ತನ್ನ ಜೀವನದ ಮಾರ್ಗವನ್ನಾಗಿ ಆರಿಸಿಕೊಂಡರು. ಹೀಗೆ ಬದುಕು ಸಾಗಿಸುತ್ತಿದ್ದ ಕೃಷ್ಣರಿಗೆ 1998ರಲ್ಲಿ ಜೀವನದ ಹೊಸ ಅಧ್ಯಾಯ ಆರಂಭವಾಯಿತು. ಮೆಸ್ಕಾಂ (KEB - ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್) ನಲ್ಲಿ ಕಾಂಟ್ರಾಕ್ಟ್ ಆಧಾರದ ಮೇಲೆ ಕೆಲಸ ದೊರಕಿತು. ತಾತ್ಕಾಲಿಕ ಕೆಲಸವಾದರೂ ಅದನ್ನು ತಮ್ಮ ಜೀವನದ ಅವಕಾಶವನ್ನಾಗಿ ಪರಿಗಣಿಸಿ ಶ್ರಮದಿಂದ ಕೆಲಸ ಮಾಡಿದರು. ಹತ್ತು ವರ್ಷಗಳ ಕಠಿಣ ಪರಿಶ್ರಮದ ಬಳಿಕ 2008ರಲ್ಲಿ ಅವರು ಶಾಶ್ವತ ನೌಕರರಾಗಿದರು. ಆದರೆ ವಿಧಿಯಾಟ ಯಾರಿಗೂ ತಿಳಿಯದು.

ಜೂನ್ 15, 2011 ರಂದು ಎಂದಿನಂತೆ ಕೆಲಸಕ್ಕೆ ಹೋದ ಕೃಷ್ಣರವರು ಅಕಸ್ಮಾತ್ ಕರೆಂಟ್ ಕಂಬದಿಂದ ಕೆಳಗೆ ಬಿದ್ದು ಭೀಕರ ಅಪಘಾತಕ್ಕೊಳಗಾದರು. ತಕ್ಷಣ ಅವರನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ದೇವರ ಕೃಪೆಯಾದರೂ ವಿಧಿಯ ತೀರ್ಪು ಬೇರೆಯೇ ಇತ್ತು ಬೆನ್ನುಹುರಿಗೆ ಗಂಭೀರ ಗಾಯವಾಗಿತ್ತು.

ತನಗೆ ಶಸ್ತ್ರಚಿಕಿತ್ಸೆಯನ್ನು ಮಾಡಿದ ಡಾ. ಮುರಳೀಧರ ಪೈ ಅವರು, "ಇನ್ನು ಮುಂದೆ ನಡೆಯಲು ಸಾಧ್ಯವಿಲ್ಲ... ಗಾಲಿಕುರ್ಚಿಯ ಮೂಲಕವೇ ಜೀವನ ಮುಂದುವರಿಸಬೇಕು," ಎಂದು ತಿಳಿಸಿದಾಗ ಕೃಷ್ಣರವರು ಆಘಾತಕ್ಕೆ ಒಳಗಾದರು. ಗುಣಮುಖವಾಗಬಹುದು ಎಂದು ಭಾವಿಸಿದ್ದ ಇವರು ಎರಡು ವರ್ಷಗಳ ಕಾಲ ಹಾಸಿಗೆಯಲ್ಲೇ ಕಳೆದರು. ಕೃಷ್ಣರವರು ಜೀವನದಲ್ಲಿ ಭರವಸೆಯನ್ನೇ ಕಳೆದುಕೊಳ್ಳುವ ಹಂತಕ್ಕೆ ಒಳಗಾದರು . ಆದರೆ ತಮ್ಮ ಪತ್ನಿ, ಕುಟುಂಬ ಹಾಗೂ ಸ್ನೇಹಿತರ ಪ್ರೋತ್ಸಾಹವೇ ಅವರಿಗೆ ಹೊಸ ಶಕ್ತಿ ನೀಡಿತು.

ಚಿಕಿತ್ಸೆಯ ಹಾದಿಯಲ್ಲಿ ಅನೇಕ ಸವಾಲುಗಳು ಎದುರಾದರೂ, ಕೃಷ್ಣ ಹಿಂತಿರುಗಲಿಲ್ಲ. ತೀರ್ಥಹಳ್ಳಿಯಲ್ಲಿ ಆಯುರ್ವೇದ ಚಿಕಿತ್ಸೆ ಪ್ರಯತ್ನಿಸಿದಾಗ ಮತ್ತೊಂದು ದುರ್ಘಟನೆ ಸಂಭವಿಸಿತು. ಬೆನ್ನಿಗೆ ಔಷಧಿಯನ್ನು ಹಚ್ಚಿ ಅದಕ್ಕೆ ತಣ್ಣನೆಯ ಗಾಳಿಯನ್ನು ಬಿಡಬೇಕಾದ ಸಂದರ್ಭದಲ್ಲಿ ತಪ್ಪಾಗಿ ಬಿಸಿ ಗಾಳಿಯನ್ನು ಬಿಟ್ಟ ಕಾರಣದಿಂದ, ಮುಂಚೆಯೇ ಇದ್ದ ಸಣ್ಣ ಗಾಯ ಈ ಅಚಾತುರ್ಯದಿಂದ ಇನ್ನಷ್ಟು ದೊಡ್ಡದಾಯಿತು. ನಂತರ ಅವರನ್ನು ಚಿಕ್ಕಮಗಳೂರು ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ 90% ಗಾಯ ಗುಣಮುಖವಾದ ಬಳಿಕ, ಉಳಿದ 10% ಗಾಯ ಗುಣಮುಖವಾಗಲು ಅವರು ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಗೆ ಭೇಟಿ ನೀಡಿ ಡಾ. ಅರವಿಂದ್ ರವರ ಮುಖಾಂತರ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು.

ಈ ಅವಧಿಯಲ್ಲಿ, ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ರವೀಶ್ ರವರ ಮುಖಾಂತರ ಕೃಷ್ಣರವರು ಸೆಂಟ್ ಜಾನ್ಸ್ ಆಸ್ಪತ್ರೆಗೆ ಹೋಗಿ ಪುನಶ್ಚೇತನದ ಬಗ್ಗೆ ತಿಳಿಯಲು ಆರಂಭಿಸಿದರು. ಅಲ್ಲಿ ಅವರು ಬೆನ್ನುಹುರಿ ಅಪಘಾತದ ಬದುಕು ಹೇಗಿರುತ್ತದೆ, ಅದರಲ್ಲಿ ಹೇಗೆ ನೂತನ ಜೀವನ ಕಟ್ಟಿಕೊಳ್ಳಬಹುದು ಎಂಬುದರ ಬಗ್ಗೆ ತಿಳಿದುಕೊಂಡರು.

ಆ ಸಮಯದಲ್ಲಿ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರನ್ನು ಪರಿಚಯಿಸಿಕೊಂಡ ಕೃಷ್ಣರವರು ಅವರ ಮಾರ್ಗದರ್ಶನದಿಂದ ಬೆನ್ನುಹುರಿ ಅಪಘಾತದ ಬಗ್ಗೆ ಹೆಚ್ಚಿನ ತಿಳುವಳಿಕೆ ಪಡೆದು, ಹೊಸ ಭರವಸೆಯ ದಾರಿಗೆ ಕಾಲಿಟ್ಟರು. ಸ್ವಲ್ಪಸ್ವಲ್ಪವಾಗಿ ಚೇತರಿಸಿಕೊಂಡ ಕೃಷ್ಣರು, ಮತ್ತೆ KEB ಯಲ್ಲೇ ತಮ್ಮ ಹಳೆಯ ಕೆಲಸವನ್ನು ಟೇಬಲ್ ವರ್ಕ್ ರೂಪದಲ್ಲಿ ಮುಂದುವರಿಸಿದರು. ಇಂದು ಗಾಲಿಕುರ್ಚಿಯಲ್ಲಿದ್ದರೂ, ಅವರ ಮನೋಬಲದ ಎತ್ತರ ಕಡಿಮೆಯಾಗಿಲ್ಲ – ತಿಂಗಳಿಗೆ ರೂ. 60,000 ಸಂಪಾದಿಸಿ ಎಲ್ಲರಿಗೂ ಸ್ಪೂರ್ತಿಯಾಗುವ ಬದುಕು ಕಟ್ಟಿಕೊಂಡಿದ್ದಾರೆ.

**ಶುಭಹಾರೈಸಲು ಸಂಪರ್ಕಿಸಿ : 91641 19523**